ಕೈಗಾರಿಕೋದ್ಯಮಿಗಳು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾಂ, ಮಂಗಳೂರು, ರಾಯಚೂರಿನಲ್ಲಿ ವಿದ್ಯುತ್ ಕೈಗಾರಿಕೆಗಳನ್ನು ಪ್ರಾರಂಭಮಾಡಲು ಅವಕಾಶ ಕೊಡಲಾಯಿತು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅದಕ್ಕೋಸ್ಕರವಾಗಿ We should be honest in our language. You call it subsidy to industries.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನನ್ನ ಎರಡನೆಯ ಪ್ರಶ್ನೆ ಕೇಳಬಹುದೇ?

ಅಧ್ಯಕ್ಷರು : ಇಲ್ಲ, ಇಲ್ಲ, ಮತ್ತೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಉಪಪ್ರಶ್ನೆ. ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೀರೆಂಬ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಅದರ ರೆಕಮಂಡೇಷನ್ಸ್ ಏನು? ಆ ಸಬ್ ಕಮಿಟಿ ಸಭೆ ಸೇರಿತ್ತೇ?

ಶ್ರೀ ಎಸ್.ಎಂ. ಕೃಷ್ಣ : ಕ್ಯಾಬಿನೇಟ್ ಸಬ್ ಕಮಿಟಿ ಆಗಿಂದಾಗ್ಗೆ ಸೇರುವುದಕ್ಕೆ ಸಾಧ್ಯ ಆಗದೇ ಈ ವಿಚಾರ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ತಾವು ಹೇಳಿರತಕ್ಕ ಎಲ್ಲಾ ಸಲಹೆಗಳನ್ನು ಗಮನದಲ್ಲಿ ತೆಗೆದುಕೊಂಡು ಒಟ್ಟಾರೆ ಒಂದು ನಿರ್ಧಾರಕ್ಕೆ ನಾವು ಬರುತ್ತೇವೆ.

ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆಯ ಕೆಲಸ

310 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆಯ ಕೆಲಸ ಯಾವ ವರ್ಷದಲ್ಲಿ ಪ್ರಾರಂಭವಾಯಿತು ಮತ್ತು ಈ ತಹಲ್ವರೆವಿಗೂ ಎಷ್ಟು ಹಣ ಖರ್ಚಾಗಿದೆ?

ಆ) ಆ ಕೆಲಸವು ಕಳೆದ 18 ವರ್ಷಗಳಿಂದಲೂ ಅಪೂರ್ಣವಾಗಿ ನಿಲ್ಲಲು ಕಾರಣವೇನು?

ಇ) ಸರ್ಕಾರ ಈ ಕೆರೆಯ ಕೆಲಸ ತ್ವರಿತವಾಗಿ ಮುಂದುವರಿಸಿ, ಮಾರ್ಚ್ 1994ರೊಳಗಾಗಿ ಪೂರೈಸಲು ಕ್ರಮ ಕೈಗೊಳ್ಳುವರೇ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಜಂಪೇನಹಳ್ಳಿ ಕೆರೆ ಕೆಲಸವನ್ನು 1977ರಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ಈ ಕಾಮಗಾರಿಗೆ 36.75 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಆ) ಭೂಸ್ವಾಧೀನತೆಯ ತೊಂದರೆ, ಏರಿಯ ತಳಪಾಯದಲ್ಲಿ ಮರಳಿನ ಪದರಗಳು ತುಂಬಾ ಆಳದವರೆಗೂ ದೊರೆತ ಕಾರಣ ಮತ್ತು ಏರಿ ನಿರ್ಮಾಣಕ್ಕೆ ಬೇಕಾಗುವ ಮಣ್ಣನ್ನು ತೆಗೆದುಕೊಳ್ಳಲು ಭೂಮಾಲೀಕರು ಅಡ್ಡಿ ಮಾಡಿದ್ದರಿಂದ ಕೆರೆ ಕೆಲಸವು ಅಪೂರ್ಣವಾಗಿ ನಿಲ್ಲಲು ಕಾರಣವಾಗಿದೆ.

ಇ) ಈ ಕೆರೆಯ ಕೆಲಸವನ್ನು ತ್ವರಿತವಾಗಿ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ. ಆದರೆ ಮಾರ್ಚ್ 94ರೊಳಗೆ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೇ, 1977ರಲ್ಲಿ ಪ್ರಾರಂಭವಾದ ಈ ಕೆರೆ ಕೆಲಸ ಇತ್ತೀಚಿನವರೆಗೆ 2 ಭಾಗ ಆಗಿದೆ. ಕಳೆದ 18 ವರ್ಷದಲ್ಲಿ ಹಳ್ಳದಪಕ್ಕ ಕೆಲಸ ಮುಗಿದಿಲ್ಲ. ಪ್ರತಿ ವರ್ಷ ಜನವರಿ ಹಾಗೂ ಡಿಸೆಂಬರ್ನಲ್ಲಿ ಕೆಲಸ ತೆಗೆದುಕೊಳ್ಳಿ ಎಂದರೆ ಸಣ್ಣ ನೀರಾವರಿ ಇಲಾಖೆಯವರು ಮಾರ್ಚಿ ತಿಂಗಳಲ್ಲಿ ಕೆಲಸಕ್ಕೆ ಕೈ ಹಾಕಿ ಏಪ್ರಿಲ್ನಲ್ಲಿ ಕೈ ಬಿಡುತ್ತಾರೆ. 2 ಅಥವಾ 3 ಲಕ್ಷ ರೂಪಾಯಿ ಖರ್ಚು ಮಾಡಿ 5-6 ಲಕ್ಷ ರೂಪಾಯಿಗೆ ಬಿಲ್ ಕೊಡುತ್ತಾರೆ. ಇವತ್ತು ಅಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ನಿದ್ರೆ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಮಂತ್ರಿಗಳನ್ನು [illegible]

ಆಗಿ ಅನೇಕ ಸಲ ಇದರ ಬಗ್ಗೆ ಹೇಳಿದ್ದೇನೆ. 18 ವರ್ಷಗಳ ಹಳೆಯ ಈ ಕೆರೆಯ ಬಗ್ಗೆ ಕಳೆದ 3 ವರ್ಷದಿಂದ ಪ್ರಶ್ನೆ ಕೇಳುತ್ತಿದ್ದೇನೆ. 7 ಅಥವಾ 8 ಲಕ್ಷ ರೂಪಾಯಿ ಅಂದಾಜಿನ ಈ ಕೆರೆ ಇವತ್ತು 34 ಲಕ್ಷ ರೂಪಾಯಿಗೆ ಬಂದು ನಿಂತಿದೆ. ಇವತ್ತು ಕೊರಟಗೆರೆ ತಾಲ್ಲೂಕಿನ ಜನರಿಗೆ ನೀರಿಗೆ ಬಹಳ ತೊಂದರೆ ಇದ್ದು ಈ ಕಾರ್ಯ ಆದಷ್ಟು ಮುಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ನಿಜ. ಕಳೆದ 16 ವರ್ಷಗಳ ಹಿಂದೆ ಕೆಲಸ ಪ್ರಾರಂಭ ಆಗಿದೆ. ಆದರೆ ಇದುವರೆಗೂ ಕೂಡ ಪೂರ್ತಿ ಆಗಿಲ್ಲ. ಆದರೆ ಈ ಕೆರೆಯನ್ನು ನಮ್ಮ ಇಲಾಖೆಗೆ 1992ರಲ್ಲಿ ವಹಿಸಲಾಗಿದೆ. 1993-94ರಲ್ಲಿ ನಾನು ಇದಕ್ಕೆ 2 ಲಕ್ಷ ರೂಪಾಯಿ ಅನುದಾನ ಕೊಟ್ಟಿದ್ದೇನೆ. ಈಗ 1994-95ರಲ್ಲಿ ಆದ್ಯತೆ ಮೇರೆಗೆ ಅನುದಾನ ಒದಗಿಸಿ ಆದಷ್ಟು ಜಾಗ್ರತೆ ಪೂರ್ತಿ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಸಿ. ವೀರಭದ್ರಯ್ಯ : ಕೆರೆ 2 ಕಡೆ ಆಗಿದೆ. ಹಳ್ಳದ ಭಾಗ ಮಾತ್ರ ಆಗಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ 2 ತಿಂಗಳಲ್ಲಿ ಮುಗಿಸಬಹುದು. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಒತ್ತಾಯ ಮಾಡಿದೆ. ಆಗ ಇದೇ ಉತ್ತರ ಬಂತು. ಆ ಜನರಿಗೆ ನೀರಿನ ಅವಶ್ಯಕತೆ ಇದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ ಚೌಧರಿ : ನಾನು ಇರಕಸಂದ್ರಕ್ಕೆ ಬಂದಿದ್ದಾಗ ತಾವು ಈ ಸಮಸ್ಯೆ ನನಗೆ ತಿಳಿಸಿದ್ದಿರಿ. ಆಗ ಈ ಕೆರೆ ನಮ್ಮ ಇಲಾಖೆಗೆ ವರ್ಗಾಯಿಸಲ್ಪಟ್ಟಿತ್ತು. ಆಗಲೇ ನಮ್ಮ ಅಧಿಕಾರಿಗಳಿಗೆ ಈ ಬಗ್ಗೆ ನೋಡಿಕೊಂಡು ಬರಲು ಆಜ್ಞೆ ಮಾಡಿದೆ. ಈಗಾಗಲೇ ಅವರು ನೋಡಿಕೊಂಡು ಬಂದು ಒಂದು ನಕ್ಷೆ ತಯಾರು ಮಾಡಿದ್ದಾರೆ. ಯಾವ ರೀತಿ ಬೇಗ ಮಾಡಬಹುದೆಂದು. ಈ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ನಗರದಲ್ಲಿರುವ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರಕ್ಕೆ ಸ್ಥಳಾಂತರ

205 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರವಾಗಿ ಸ್ಥಳಾಂತರಿಸಲು ಕ್ರಮ ತೆಗೆದು ಕೊಳ್ಳಲಾಗುವುದೆಂದು ಉತ್ತರ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ನಗರದಲ್ಲಿ ಸಣ್ಣ ನೀರಾವರಿ ಉಪವಿಭಾಗದ ಕಾರ್ಯಾಲಯ ಮೂರರಲ್ಲಿ ಒಂದನ್ನು ಸ್ಥಳಾಂತರಿಸಲು ಪರ್ಯಾಯ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆಯೇ?

ಇ) ಸೇಡಂ ನಗರ ಉಪವಿಭಾಗ, ಸೇಡಂಗೆ ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಉಪವಿಭಾಗ) ಕಾರ್ಯಾಲಯಗಳಲ್ಲಿ ಒಂದು ಉಪವಿಭಾಗವನ್ನು ಸ್ಥಳಾಂತರಿಸಿ ಈ ಭಾಗದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?